as required under Section 133 (3) of the Motor Vehicles Act, 1939.

MR. SPEAKER.—Papers laid.—

ವರದಿಗಳನ್ನೊಪ್ಪಿಸುವುದು.

ಅಧ್ಯಕ್ಷರು.—ಶ್ರೀ ಎಂ. ವೀರಪ್ಪಮೊಯ್ಲಿರವರು ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕಪತ್ರಗಳ ಆರನೇ ವರದಿಯನ್ನು ಒಪ್ಪಿಸುವುದು.

(ಮಾನ್ಯ ಸದಸ್ಯರಿಂ ಗೈರುಹಾಜರಿ)

ಶ್ರೀ ಎಂ. ಎಸ್. ನಾರಾಯಣರಾವ್.—ಅಧ್ಯಕ್ಷತೇ, ಭಾರಿ ಹಾಗೂ ಮಧ್ಯಮ ನೀರಾವರಿ ಯೋಜನೆಗಳ ಮೇಲಿನ ಅಂದಾಜುಗಳ ಸಮಿತಿಯ ಮಂಊರನೆಯ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಶ್ರೀ ಕೆ. ಕೆಂಪೇಗೌಡ.—ಅಧ್ಯಕ್ಷರೇ, ಅಧೀನಶಾಸನ ಸಮಿತಿಯ ಮಂಊರನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

SRI K. G. MAHESHWARAPPA.—On behalf of the Chairman of the Committee on Public Accounts, I present the Sixth Report of the Committee on Public Accounts on the Appropriation Accounts and Finance Accounts for the years 1975-76 to 1980-81 and the Reports of the Comptroller and Auditor General of India (Civil) for these years relating to Agriculture and Animal Husbandry Department, and

ii) Seventh Report on the action taken by Government on the I Report and VI Report of Public Accounts Committee (VI Assembly) relating to Health and Family Weifare Department.

ಅಧ್ಯಕ್ಷರು.—ವರದಿಗಳನ್ನು ಸಭೆಯ ಮುಂದೆ ಇಡಲಾಗಿದೆ. Before taking up the discussion on the official resolution, we shall take up the matter under rule 334. The hon. Member Sri G. S. Basavaraj will speak regarding distribution of text books.

ನಿಯಮ 334ರ ಮೇರೆಗೆ

ಪಠ್ಯಪುಸ್ತಕಗಳ ವಿತರಣೆಯ ಬಗ್ಗೆ

† ಶ್ರೀ ಜಿ. ಎಸ್. ಬಸವರಾಜ್ (ಅರಸಿಕೆರೆ).— ಮಾನ್ಯ ಅಧ್ಯಕ್ಷರೇ, ಅಖಿಲ ಕರ್ನಾಟಕ ಪತ್ರಿಕಾ ವಿತ್ತು ಪ್ರಕಾಶಕರ ಸಂಘದವರು ಈ ಪಠ್ಯಪುಸ್ತಕಗಳ ವಿತರಣೆ ಬಗ್ಗೆ ಸಂಪು ನಡೆಸಿದುದರ ಪರಿಣಾಮವಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಎಲ್ಲರಿಗೂ ಗೊತ್ತಿರತಕ್ಕಂಥಾ ವಿಷಯವಾಗಿದೆ. ಇದರ ಬಗ್ಗೆ ನಾನು ಕೆಲವು ಅಂಶಗಳನ್ನು ಹೇಳಿ ಈ ಸದನದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಈ ವ್ಯಾಪಾರಸ್ಥರು ಸಂಮಾರು ೨೦ ವರ್ಷಗಳಿಂದಲೂ ಕೂಡ ೧೫ ಪರ್ಸೆಂಟ್ ಕಮೀಷನ್ ನಂತೆ ಈ ಪಠ್ಯಪುಸ್ತಕಗಳನ್ನು ಮಾರಾಟ ಮಾಡುತ್ತಾ ಇರತಕ್ಕಂಥಾದ್ದು ಸಾರ್ವಜನಿಕರಿಗೂ ಹಾಗೂ ಸರ್ಕಾರಕ್ಕೂ ಗೊತ್ತಿರತಕ್ಕಂಥಾ ವಿಷಯ. ಆದರೆ ಯಾವ ಕಾರಣದಿಂದಲೋ ಏನೋ ಈ ಕಮೀ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಷನ್‌ನ್ನು ೧೨ ಪರ್ಸೆಂಟಿಗೆ ಇಳಿಸಿರತಕ್ಕಂಥಾದ್ದು ನನಗೆ ತಿಳಿಯುದು. ಈ ವ್ಯಾಪಾರಸ್ಥರು ಸಂಪು ನಡೆಸಿದಂದರ ಪರಿಣಾಮವಾಗಿ ಈ ಪಠ್ಯಪುಸ್ತಕಗಳನ್ನು ಹಂಚಲಾ ಟಿ.ಎಂ.ಪಿ.ಸಿ. ಮುಖಾಂತರ ಹಾಗೂ ಕೋ ಆಪರೇಟಿವ್ ಇಸ್ಟಿಟ್ಯೂಷನ್ಸ್ ಮುಖಾಂತರ ವ್ಯವಸ್ಥೆ ಮಾಡಿರತಕ್ಕಂಥಾದ್ದು ಸರ್ಕಾರಕ್ಕೆ ಗೊತ್ತಿರತಕ್ಕಂಥಾ ವಿಷಯ. ಇದರಲ್ಲಿ ಬೇಕಾದಷ್ಟು ನ್ಯೂನತೆ ಇದೆ ಎಂದಂ ಹೇಳಬೇಕಾಗಿದೆ ಉದಾಹರಣೆಗೆ ಜನತಾಬಜಾರ್ ಮುಖಾಂತರ ಈ ಪಠ್ಯಪುಸ್ತಕಗಳನ್ನು ಹಂಚಲು ಸರ್ಕಾರವೇ ಅವರಿಗೆ ೫೦–೬೦ ಸಾವಿರ ಕೊಟ್ಟು ಹಂಚುತ್ತಿದ್ದಾರೆ, ಹಾಗೇ ಸೊಸೈಟಿಯವರೂ ಸಹ ಹಂಚುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಎಷ್ಟರಮಟ್ಟಿಗೆ ತೊಂದರೆಯಾಗಿದೆ ಎನ್ನುವುದನ್ನು ನಾವೆಲ್ಲಾ ಪತ್ರಿಕೆಯಲ್ಲಿ ಓದಿದ್ದೇವೆ. ಇದರ ಬಗ್ಗೆ ಸಂಘದವರು ಮಾನ್ಯಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ನಮಗೆ ೨೦ ಪರ್ಸೆಂಟ್ ಕಮೀಷನ್ ಕೊಡಬೇಕಂ ಎಂದು ಮನವಿ ಸಲ್ಲಿಸಿರತಕ್ಕಂಥಾದ್ದು ಸಹ ತಮಗೆ ಗೊತ್ತಿರತಕ್ಕಂಥಾ ವಿಷಯ. ಆದಕ್ಕೆ ಮಾನ್ಯ ಮುಖ್ಯಮಂತ್ರಿಗಳು ೧೫ ಪರ್ಸೆಂಟ್ ಕಮೀಷನ್ ಕೊಡುತ್ತೇವೆಂದು ಒಪ್ಪಿಕೊಂಡಿರತಕ್ಕಂಥಾದ್ದರ ಬಗ್ಗೆ ಒಂದು ಮನವಿ ಕೊಟ್ಟಿದ್ದಾರೆ. ಹಾಗೆಯೇ ಮಾನ್ಯ ವಿದ್ಯಾ ಸಚಿವರಾದ ಶ್ರೀ ರಾಚಯ್ಯನವರನ್ನೂ ಸಹ ಕಂಡು ಇದರಲ್ಲಿರತಕ್ಕಂಥಾ ತೊಂದರೆಗಳನ್ನು ಹೇಳಿ ನಾವು ಒಟ್ಟು ೮ ಸಾವಿರ ವ್ಯಾಪಾರಸ್ಥರು ಇದ್ದೇವೆ, ನಮಗೆ ಈ ಕಮೀಶನ್ ಬೆಲೆ ಇಳಿಸಿದರೆ ನಾವು ಬಹಳ ತೊಂದರೆಗೆ ಈಡಾಗುತ್ತೇವೆ, ನಮಗೆ ಜಾಸ್ತಿ ಕಮೀಷನ್ ಕೊಡಿಸಿಕೊಡಬೇಕೆಂದು ಮನವಿ ಕೊಟ್ಟಿದ್ದಕ್ಕೆ, ಅವರು ವಿನಂ ಹೇಳಿದರು ಎಂದರೆ ಈ ವಿಷಯಂ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿದೆ, ಆದುದರಿಂದ ಜಾಸ್ತಿ ಕಮೀಷನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಈ ವಿಷಯದಲ್ಲಿ ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇವೆ ಅದೇನೆಂದರೆ ಈ ಹಿಂದೆ ಕಮೀಷನ್ ೧೫ ಪರ್ಸೆಂಟ್ ಇದ್ದಾಗ ಪುಸ್ತಕಗಳ ಬೆಲೆ ಹೇಗಿತ್ತು ಈಗ ಹೇಗೆ ಇದೆ ಅನ್ನುವುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹಿಂದೆ ೩ ನೇ ತರಗತಿಯ ಗಣಿತ ೨–೨೦ ಇದ್ದದ್ದನ್ನು ಈಗ ೩ ರೂಪಾಯಿ ಮಾಡಿದ್ದಾರೆ. ಹಾಗೆ ೧೦ ನೇ ತರಗತಿ ಗಿರುವ ಸಮಾಜ ಶಾಸ್ತ್ರ ಹಿಂದೆ ೧–೫೦ ಇದ್ದದ್ದು ಈಗೆ ೨–೪೦ ಆಗಿದೆ. ಹಾಗೆಯೇ ೧೦ನೇ ತರಗತಿಯ ವಿಜ್ಞಾನ ಹಿಂದೆ ೨–೯೦ ಇದ್ದುದು ಈಗ ೫ ರೂಪಾಯಿಂ ಆಗಿದೆ. ಇದರಿಂದ ಸಾರ್ವಜನಿಕರಿಗೆ ಎಷ್ಟರ ಮಟ್ಟಿಗೆ ತೊಂದರೆಯಾಗಿದೆ ಎನ್ನತಕ್ಕಂಥಾದ್ದನ್ನು ಗಮನಿಸಿ ಸರ್ಕಾರದವರು ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಈ ಪಠ್ಯಪುಸ್ತಕಗಳನ್ನು ಮಾರಾಟ ಮಾಡುವ ವ್ಯಾಪಾರಸ್ಥರಿಗೆ ಕೊನೇ ಪಕ್ಷ ೧೫ ಪರ್ಸೆಂಟ್ ಆದರೂ ಮಾಡಿಕೊಡಬೇಕೆಂದು ಈ ಸದನದ ಮುಖಾಂತರ ನಾನು ಮಾನ್ಯ ಮಂತ್ರಿಗಳನ್ನೂ ಮತ್ತು ಮಾನ್ಯಮುಖ್ಯಮಂತ್ರಿಗಳನ್ನೂ ಕೇಳಿಕೊಳ್ಳುತ್ತೇನೆ. ದಯಮಾಡಿ ಸರ್ಕಾರದವರು ಇದಕ್ಕೆ ಉತ್ತರ ಕೊಡಬೇಕೆಂದಂ ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಜೆ. ಡಿ. ಸೋಮಪ್ಪ.— ಅಧ್ಯಕ್ಷರೇ, ನಾನು ಇದಕ್ಕೆ ಸಹಿ ಮಾಡಿದ್ದೇನೆ. ನಾನು ಎರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಮಾತನಾಡಲು ಅವಕಾಶಕೊಡಿ.

ಅಧ್ಯಕ್ಷರು — ಎಲ್ಲಾ ವಿಚಾರಗಳನ್ನೂ ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಹೇಳದೇ ಇದ್ದಂಥಾ ಯಾವುದಾದರೂ ಎರಡು ವಿಚಾರಗಳು ಇದ್ದರೆ ಮಾತ್ರ ಹೇಳಿ.

ಶ್ರೀ ಜೆ. ಡಿ. ಸೋಮಪ್ಪ (ಸಕಲೇಶಪುರ).— ಮಾನ್ಯ ಅಧ್ಯಕ್ಷರೇ. ಇಂದಿನ ಬಾಲಕರೇ ಮುಂದಿನ ಪ್ರಜೆಗಳು. ಈ ವಿಚಾರವನ್ನಿಟ್ಟು ನಾವು ಇಂದು ಅವರಿಗೆ ಶಿಕ್ಷಣ ಕೊಡುತ್ತಿದ್ದೇವೆ. ಹೀಗಿರುವಾಗ ಆ ಬಾಲಕರಿಗೆ ಸರಿಯಾಗಿ ಪಠ್ಯಪುಸ್ತಕಗಳು ಸಿಗದೇ ಹೋದರೆ ಶಿಕ್ಷಣ ಎಲ್ಲಿ ಬರುತ್ತದೆ ? ಸುಮಾರು ೨೫–೩೦ ವರ್ಷದಿಂದಲೂ ಕೂಡ ಈ ವ್ಯಾಪಾರಸ್ಥರು ಇದನ್ನು ೧೫ ಪರ್ಸೆಂಟ್ ಕಮೀಷನ್ ನಂತೆ ನಡೆಸಿಕೊಂಡು ಬರುತ್ತಿದ್ದಾರೆ. ಈಗ ತಮಗೆ ಗೊತ್ತಿರುವ ಹಾಗೆ ಎಲ್ಲಾ ಪದಾರ್ಥಗಳ ಧಾರಣೆ ವಾಸಿಗಳೂ ಸಹ ಜಾಸ್ತಿಯಾಗಿರುವುದರಿಂದ ನಮ್ಮ ಕಮಿಷನ್‌ನ್ನೂ ಸಹಾ ಜಾಸ್ತಿ ಮಾಡಬೇಕಂ ಎಂದು ಕೇಳಿದ್ದಾರೆ ಅವರಿಗೆ ಜಾಸ್ತಿ ಕಮೀಷನ್ ಕೊಡುವುದು, ಬಿಡುವುದಂ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯಂ. ನಾನು ಒತ್ತಾಯ ಮಾಡುವುದಿಲ್ಲ. ಇರುವ ವಿಷಯ ಹೇಳಬೇಕಾಗಿದೆ, ಅದಲ್ಲದೆ ಈ ಪಠ್ಯಪುಸ್ತಕಗಳು ಏನಾದರೂ ಡ್ಯಾಮೇಜ್ ಆದರೆ ಅದನ್ನು ಡಿಸಂಬರ್ ತಿಂಗಳೊಳಗೆ ರೀ ಇಂಬರ್ಸ್ ಮಾಡಬೇಕು, ಹಾಗೆ ರೀ ಇಂಬರ್ಸ್ ಮಾಡದೇ ಹೋದರೆ ಮಾರ್ಚ್ ತಿಂಗಳವರೆಗೂ ಆ ಪುಸ್ತಕಗಳನ್ನು ಅವರೇನಾದರೂ ಇಟ್ಟುಕೊಂಡರೆ, ಅದು ಮಾರಾಟವಾಗದೇ ಹೋದರೆ ಅಥವಾ ಆ ಪುಸ್ತಕಗಳನ್ನು ಏನಾದರೂ ಛೇಂಜ್ ಮಾಡಿದರೆ ಅವೆಲ್ಲಾ ಲುಕ್ಸಾನಾಗಿ ಬಿಡುತ್ತದೆ. ಒಂದು ತಿಂಗಳೊಳಗೆ ಅದನ್ನು ಬದಲಾಯಿಸಿಕೊಳ್ಳದೇ ಹೋದರೆ ಇದರಿಂದ ಅವರಿಗೆ ಬಹಳ ನಷ್ಟವಾಗುತ್ತದೆ. ಇದನ್ನು ಸಹ ತಾವು

ಗವಂನಿಸಬೇಕು. ಎರಡನೆಯಂದಾಗಿ ಈಗ ಸೊಸೈಟಿಗಳ ಮುಖಾಂತರ ಈ ಪಠ್ಯಪುಸ್ತಕಗಳನ್ನು ಏನು ವಿತರಣೆ ಮಾಡುತ್ತಿದ್ದೀರೋ ಅವರಿಗೆ ಸಾಲ ಕೊಟ್ಟು ಇದನ್ನು ವಿತರಣೆ ಮಾಡಿಸುತ್ತಿದ್ದೀರಿ. ಅಲ್ಲದೆ ಆ ಸೊಸೈಟಿಗಳಲ್ಲಿ ಬಾಲಕರು ಪುಸ್ತಕಗಳನ್ನು ತೆಗೆದುಕೊಳ್ಳಬೇಕಾದರೆ ಅಲ್ಲಿ ಕೂಡ ನಿಲ್ಲಬೇಕು. ತಮಗೆ ಹೇಳಬೇಕಾದರೆ ನಿನ್ನೆ ದಿವಸ ನನ್ನ ಹತ್ತಿರ ಒಬ್ಬರು ಬಂದಿದ್ದರು, ಅವರು ಏನು ಎನು ಹೇಳಿದರು ಎಂದರೆ ಈ ಸೊಸೈಟಿಯಲ್ಲಿ ಪುಸ್ತಕಗಳನ್ನು ಕೊಂಡುಕೊಳ್ಳಲಿಕ್ಕೆ ನಮ್ಮ ಹುಡುಗನ ಕೈನಲ್ಲಿ ಶನಿವಾರ ದಿವಸ ದುಡ್ಡು ಕೊಟ್ಟು ಕಳುಹಿಸಿದೆ ಅವನು ಪುಸ್ತಕವನ್ನು ತೆಗೆದುಕೊಂಡು ಬಂದನು, ನಾವು ಅದು ವರೆಗೆ ಹುಡುಕಿ ಹುಡುಕಿ ಸಾಕಾಯಿತು. ಕೊನೆಗೆ ಅವನು ಮನೆಗೆ ಬಂದಾಗ ಕೇಳಿದ್ದಕ್ಕೆ ಅವನು ಏನು ಹೇಳಿದನು ಎಂದರೆ ನಾನು ಅಲ್ಲೇ ಮಲಗಿದ್ದೆ ಅಲ್ಲೇ ಮಲಗಿರಬೇಕಾಯಿತು, ಇಲ್ಲದೇ ಹೋಗಿದ್ದರೆ ಈ ಪುಸ್ತಕ ಸಿಗುತ್ತಿರಲಿಲ್ಲ, ಈವಾಗ ಸಿಕ್ಕಿತು ತೆಗೆದುಕೊಂಡೇ ಬಂದೆ ಎಂದು ಹೇಳಿದ. ಹೀಗೆ ತಂದೆ ತಾಯಿಗಳು ಅವರ ಮಕ್ಕಳನ್ನು ಪುಸ್ತಕ ತರಿಸಲಿಕ್ಕೆ ಕಳುಹಿಸಿ, ಆ ಹುಡುಗ ಸಕಾಲಕ್ಕೆ ಬರದೇ ಹೋದರೆ ಬೀದಿ ಬೀದಿ ಅಲೆದು ಭೀತಿ ಪಡುವುದು, ಆ ಹುಡುಗನಿಗೆ ಹೊಟ್ಟೆಗೂ ಇಲ್ಲದ ಅಲ್ಲೇ ಒದ್ದಾಡುವುದು ಈ ಪರಿಸ್ಥಿತಿ ಇದೆ. ಆದುದರಿಂದ ಈಗಲಾದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಗಮನ ಹರಿಸಿ ಆ ವ್ಯಾಪಾರಸ್ಥರಿಗೆ ೧೫ ಪರ್ಸೆಂಟಾದರೂ ಕಮೀಷನ್ ಕೊಟ್ಟು ಒಂದು ಸರಿಯಾದ ವ್ಯವಸ್ಥೆ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ. ಸಕಾಲಕ್ಕೆ ಪಠ್ಯಪುಸ್ತಕಗಳು ಅವರಿಗೆ ಸಿಗದೇ ಹೋದರೆ ಪಾಠವೂ ಕೂಡ ಮಕ್ಕಳಿಗೆ ಸರಿಯಾಗಿ ಆಗುವುದಿಲ್ಲ. ಇದನ್ನು ನೋಡಿದರೆ ಇದರಲ್ಲಿ ಏನೋ ಕೈವಾಡ ಇದೆಯೋ ಏನೋ ಎಂದು ನನಗೆ ಅನಿಸುತ್ತದೆ. ಈ ಬಗ್ಗೆ ವ್ಯಾಪಾರಸ್ಥರೂ ಸಹ ಸಹಕರಿಸದೇ ಹೋದರೆ ಹುಡುಗರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಈಗ ಇರತಕ್ಕಂಥಾ ತೊಂದರೆಯನ್ನು ತಪ್ಪಿಸಿ ಸಂಗುಮ ವಾಗಿ ಬಾಲಕರಿಗೆ ಪಠ್ಯಪುಸ್ತಕಗಳು ಸಿಗುವಹಾಗೆ ಅಂಗಡಿಗಳಿಗೆ ಕೊಟ್ಟು ಹಿಂದೆ ಯಾವರೀತಿ ಇತ್ತೋ ಆ ರೀತಿಯಾಗಿ ಒಂದು ವ್ಯವಸ್ಥೆ ಸರ್ಕಾರ ಮಾಡಬೇಕು ಎಂದು ನಾನು ಮಾನ್ಯ ವಿದ್ಯಾಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ (ವಿದ್ಯಾಮಂತ್ರಿಗಳು) -- ಮಾನ್ಯ ಅಧ್ಯಕ್ಷರೇ, ಈ ಪಠ್ಯಪುಸ್ತಕಗಳ ಮಾರಾಟ ವ್ಯವಸ್ಥೆಯಲ್ಲಿ ಹಿಂದೆ ಹೇಗೆ ಇತ್ತು ಎಂದರೆ ಇದರಲ್ಲಿ ಒಟ್ಟು ೨೩೦೦ ಜನರು ರಿಜಸ್ಟರ್ ಮಾಡಿಸಿಕೊಂಡಿರುತ್ತಾರೆ. ಅವರಿಗೆ ಮೊದಲು ೧೫ ಪರ್ಸೆಂಟ್ ಕಮೀಷನ್‌ನ್ನು ಕೊಡುತ್ತಾ ಇದ್ದೆವು. ನಾವು ಈ ವರ್ಷ ಎನು ಮಾಡಿದೆವು ಎಂದರೆ ಈ ಪಠ್ಯಪುಸ್ತಕಗಳ ಮುದ್ರಣವನ್ನು ಬೇರೆ ಒಂದು ಕಡೆ ಮಾಡಿಸಿ ಮೇ ತಿಂಗಳ ಅಖೈರ್ ಒಳಗೆ ಎಲ್ಲಾ ಪುಸ್ತಕಗಳನ್ನೂ ಕೂಡ ಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡಬೇಕು ಎಂದು ಮಾಡಿದೆವು. ತಮಗೆ ಹೇಳಬೇಕಾದರೆ ಇದರಲ್ಲಿ ೪೮೦ ಟೈಟಲ್ಸ್ ಇವೆ. ಅವೆಲ್ಲ ವನ್ನೂ ಸಹ ಕಾಲಕ್ಕೆ ಸರಿಯಾಗಿ ಮುದ್ರಣ ಮಾಡಿಸಿ ಎಲ್ಲಾ ಕಡೆಯಲ್ಲೂ ಕಾಲಕ್ಕೆ ಸರಿಯಾಗಿ ಹಂಚಬೇಕು ಎಂದು ಮಾಡಿದೆವು. ಆಯಾಯ ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗಳಿಗೂ ಸಹ ಕಾಲಕ್ಕೆ ಸರಿಯಾಗಿ ತೆಗೆದು ಕೊಂಡು ಹೋಗತಕ್ಕಂಥಾ ವ್ಯವಸ್ಥೆಯನ್ನು ನಾವು ಈ ಬಾರಿ ಪ್ರಪ್ರಥಮವಾಗಿ ಮಾಡಿದ್ದೇವೆ ಅನ್ನುವ ಮಾತನ್ನು ಹೇಳ ಬಯಸಂಕ್ತೇನೆ ನಾನು ಇದರ ಕಮೀಷನ್ ಬೆಲೆಯನ್ನು ೧೫ ಪರ್ಸೆಂಟ್ ಇದ್ದುದನ್ನು ೧೨ ಪರ್ಸೆಂಟ್ ಮಾಡಿದುದಕ್ಕೆ ಕಾರಣ ಈ ರೀತಿ ಇದೆ. ಅವರು ನಮ್ಮನ್ನು ೧೫ ಪರ್ಸೆಂಟ್ ಕಮೀಷನ್ ಕೊಡಬೇಕು ಎಂದು ಕೇಳಿದರು. ಅದು ಆಗುವುದಿಲ್ಲ, ಕಾರಣ ನಾವು ಈ ಪುಸ ಕಗಳನ್ನು ನ್ಯಾಷನಲೈಸ್ ಮಾಡಿದುದರ ಉದ್ದೇಶ ವಿವೆಂದರೆ ಮಕ್ಕಳಿಗೆ, ಈ ಪಠ್ಯಪುಸ್ತಕಗಳನ್ನು ಆದಷ್ಟು ಮಟ್ಟಿಗೆ ಕಡಿಮೆ ಬೆಲೆಯಲ್ಲಿ ದೊರೆಯುವ ಹಾಗೆ ಮಾಡಬೇಕೆನ್ನುವುದೇ ನಮ್ಮ ಉದ್ದೇಶ. ತಮಗೆ ಹೇಳಬೇಕಾದರೆ ಹಿಂದೆ ಈ ಪಠ್ಯಪುಸ್ತಕಗಳು ಮುದ್ರಣ ಮಾಡಿದ ಮೇಲೆ ಬಹಳ ಬೆಲೆಗೆ ಮಾರಾಟ ಮಾಡುತ್ತಿದ್ದರು. ಆದನ್ನು ನಾವು ನೋಡಿ ಇದನ್ನು ನ್ಯಾಷನಲೈಜೇಷನ್ ಮಾಡಿ, ಆದಷ್ಟು ಕಡಿಮೆ ಬೆಲೆಗೆ ಆ ಬಾಲಕರಿಗೆ ಸಿಗುವ ಹಾಗೆ ಮಾಡಬೇಕೆನ್ನುವುದೇ ನಮ್ಮ ಉದ್ದೇಶವಾಗಿದೆ. ಆದರೆ ಈ ಪುಸ್ತಕಗಳೆಲ್ಲವನ್ನೂ ಕಾಲಕ್ಕೆ ಸರಿಯಾಗಿ ಮುದ್ರಣ ಮಾಡಲು ನಮ್ಮ ಸರ್ಕಾರದ ಮುದ್ರಣಾಲಯದ ಒಂದರಲ್ಲೇ ಮಾಡಿಸುವುದ ಕ್ಕಾಗುವುದಿಲ್ಲ ಎಂದು ತಿಳಿದು ಇದನ್ನು ಗೌರ್ನಮೆಂಟ್ ಆಫ್ ಇಂಡಿಯಾ ಪ್ರೆಸ್‌ನಲ್ಲಿ, ಜರ್ಮನ್ ಪ್ರೆಸ್ ನಲ್ಲಿ ಹಾಗೂ ಖಾಸಗೀ ಪ್ರೆಸ್‌ನಲ್ಲಿ ಮುದ್ರಣ ಮಾಡಿಸಂವ ವ್ಯವಸ್ಥೆ ಮಾಡಬೇಕಾಯಿತು. ಹಾಗೆ ಮಾಡ ಬೇಕಾದರೆ ಆ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರಿಗೆ ಭತ್ಯ ವಗೈರೆ ಕೊಡಬೇಕಾ ಗುತ್ತದೆ. ಪ್ರಿಂಟಿಂಗ್ ಪ್ರೆಸ್‌ನಲ್ಲಿ ಇದನ್ನು ಮಾಡಿಸಬೇಕಾದ ವೆಚ್ಚ ಇವೆಲ್ಲವನ್ನೂ ಲೆಕ್ಕಾಚಾರ ಹಾಕಿ ಆ ಬಾಲಕರಿಗೆ ಹೆಚ್ಚು ಬೆಲೆ ಆಗದೇ ಇರುವ ಹಾಗೆ ಇದನ್ನು ಸರಿದೂಗಿಸಬೇಕಾದರೆ ನಮ್ಮ

ಇಲಾಖೆಯನಿರ್ದೇಶಕರು ಈ ವ್ಯಾಪಾರಸ್ಥರಿಗೆ ಕೊಡಬೇಕಾದ ಕಮಿಷನ್‌ನಲ್ಲಿ ೧೫ಪರ್ಸೆಂಟ್ ಇದ್ದುದನ್ನು ೧೨ ಪರ್ಸೆಂಟಿಗೆ ಇಳಿಸಿದರೆ ಮಾತ್ರ ಇದನ್ನು ಸರಿದೂಗಿಸಬಹುದು ಎಂದು ಅವರು ವರದಿ ಕೊಟ್ಟಮೇಲೆ ಈ ರೀತಿ ಮಾಡಬೇಕಾಯಿತು. ಅದಲ್ಲದೆ ಈ ಪಠ್ಯಪುಸ್ತಕಗಳನ್ನು ನಮ್ಮ ಸರ್ಕಾರೀ ವಾಹನಗಳಲ್ಲೇ ಜಿಲ್ಲಾಮಟ್ಟ ಮತ್ತು ತಾಲ್ಲೂಕು ಮಟ್ಟಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಇರತಕ್ಕಂಥಾ ಗೋಡೌನಲ್ಲಿ ಡಂಪ್ ಮಾಡಿ ವಿತರಣೆ ಮಾಡಿದರೆ ಆ ಹುಡುಗರಿಗೆ ಸ್ವಲ್ಪ ಬೆಲೆಯೂ ಕಡಿಮೆಯಾದಂತಾಗುತ್ತದೆ. ಎಂದು ಹೇಳಿದರು.

ಆ ದೃಷ್ಟಿಯಿಂದ ೧೨ ಪರ್ಸೆಂಟ್ ಕಮಿಷನ್ ಸಾಕಾಗುತ್ತದೆ ಎಂದು ಹೇಳಿದರಂ. ಅವರು ಮನವಿ ಕೊಟ್ಟಮೇಲೆ ನಾನು ಅಸೆಂಬ್ಲಿಯಲ್ಲೂ ಕೂಡ ಈ ವರ್ಷ ಕಮಿಷನ್ ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದಂ ಹೇಳಿದೆ. ಪಠ್ಯಪುಸ್ತಕಗಳಿಗೆ ಸರ್ಕಾರದ ಸಮಿತಿಯವರು ಏನು ಬೆಲೆ ನಿಗದಿ ಮಾಡಿದ್ದಾರೋ ಅದರ ಪ್ರಕಾರ ಮಾರಾಟ ಮಾಡುತ್ತಿದ್ದಾರೆಯೇ ಏನಹ ಅವರಿಗೆ ಕೊಡತಕ್ಕಂಥ ಕಮಿಷನ್‌ನ್ನು ಹೆಚ್ಚಿಗೆ ಮಾಡುವುದರಿಂದ ಮಕ್ಕಳ ಪಠ್ಯಪುಸ್ತಕಗಳ ಬೆಲೆ ಜಾಸ್ತಿಯಾಗುತ್ತದೆ. ಅದನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಒಂದುವೇಳೆ ಈ ವರ್ಷ ಮಾಡುವುದಕ್ಕೆ ಆಗದೇಹೋದರೆ ಬೇರೆ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದುಹೇಳಿದೆ ಬಾಂಬೆ, ಆಂಧ್ರಪ್ರದೇಶ ತಮಿಳುನಾಡು ಮುಂತಾದ ನೆರೆ ಪ್ರಾಂತ್ಯಗಳಲ್ಲಿ ಇಲ್ಲಿಗಿಂತ ಕಡಿಮೆ ಕಮಿಷನ್ ಕೊಡುವಾಗ ಇಲ್ಲಿ ಏಕೆ ಹೆಚ್ಚಿಗೆ ಕೊಡಬೇಕು. ವ್ಯಾಪಾರ ಮಾಡತಕ್ಕವರು ಜಿಲ್ಲಾಕೇಂದ್ರದಿಂದ ತಾಲ್ಲೂಕಂ ಕೇಂದ್ರಕ್ಕೆ ಪಾತ್ಯತೆಗೆದುಕೊಂಡು ಹೋಗುತ್ತಾರೆಯೇ ಹೊರತು ಬೆಂಗಳೂರಿಗೆ ಬಂದು ತೆಗೆದುಕೊಂಡು ಹೋಗತಕ್ಕಂತ ವ್ಯವಸ್ಥೆಯಿಲ್ಲ. ಟ್ರಾನ್ಸ್‌ಪೋರ್ಟ್ ಚಾರ್ಜಸ್ ಸರ್ಕಾರ ವಿಾಟ್ ಮಾಡುತ್ತಿದೆ. ಆದ್ದರಿಂದ ತೊಂದರೆಯಾಗುವುದಿಲ್ಲ, ನೀವು ಸಹಕರಿಸಬೇಕು, ಮಾನ್ಯ ಮುಖ್ಯ ಮಂತ್ರಿಗಳು ನಿಮಗೆ 'ಪರಿಶೀಲಿಸುತ್ತೇನೆ' ಎಂದು ಹೇಳಿದ್ದರೆ ಅವರು ಬಂದ ಮೇಲೆ ಅವರ ಜೊತೆಯಲ್ಲಿ ಮಾತನಾಡಿ ಮಂಡಲದ ಮುಂದೆ ಇಡುತ್ತೇನೆ. ಈ ಸಾರಿ ನೀವು ವಿದ್ಯಾರ್ಥಿಗಳಿಗೆ ತೊಂದರೆ ಕೊಡಬಾರದು, ತಂದೆ ತಾಯಿಗಳಿಗೆ ತೊಂದರೆ ಕೊಡಬಾರದು ಸಹಕರಿಸಬೇಕೆಂದು ಎಂದು ಕೇಳಿಕೊಂಡಿದ್ದೇನೆ, ಮಾನ್ಯ ಸೋಮಪ್ಪ ನವರು ಏನೋ ಕೈವಾಡ ಇದೆ ಎಂದು ಹೇಳಿದರು. ಈಗ ಪಠ್ಯಪುಸ್ತಕಗಳ ಮುದ್ರಣವನ್ನು ರಾಷ್ಟ್ರೀಕರಣ ಮಾಡಿದ್ದೇವೆ. ಇನ್ನು ಡಿಸ್ಟ್ರಿಬ್ಯೂಷನ್‌ನ್ನೂ ಕೂಡ ರಾಷ್ಟ್ರೀಕರಣ ಮಾಡಬೇಕಾಗುತ್ತದೆ. ಇದರಲ್ಲಿ ಕೈವಾಡ ಇದೆ ಎಂದು ಏನು ಹೇಳಿದ್ದಾರೆ, ಅದರಲ್ಲಿ ಅವರಿಗೆ ಕೈವಾಡ ಇದೆಯೋ, ನನಗೆ ಇದೆಯೋ ನೋಡಿ. ಜನತೆಯ ಪ್ರತಿನಿಧಿಗಳಾಗಿರುವ ಅವರು ಇವತ್ತು ಹೃದಯ ಮುಟ್ಟಿಕೊಂಡು ಹೇಳಬೇಕು. ಬಾಯಿಗೆ ಬಂದ ಹಾಗೆ ಆರೋಪಣೆ ಮಾಡಿದರೆ ಆಗುವುದಿಲ್ಲ. ಯಾರಾದರೂ ಆರೋಪಣೆ ಮಾಡಬೇಕಾದರೆ, ವಿಿತಿ ಇರಬೇಕು. ಮಾನ್ಯ ಸೋಮಪ್ಪನವರಿಂದ ನಾನಂ ಕೇಳಬೇಕಾಗಿಲ್ಲ. ಆರೋಪಣೆ ಮಾಡಬೇಕಾದರೆ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ಮಾತನಾಡಬೇಕು. ಎಲ್ಲಾದರೂ ಯಾರಿಗಾದರೂ ಈ ರೀತಿ ನನ್ನಿಂದ ಕಮಿಷನ್‌ಗೋಸ್ಕರ ಏನಾದರೂ ಕೈವಾಡ ಆಗಿದ್ದ ಪಕ್ಷದಲ್ಲಿ ಅವರು ಬಂದಂ ಹೇಳಲಿ, ನಾನು ರಾಜಕೀಯದಿಂದಲೇ ನಿವೃತ್ತನಾಗುತ್ತೇನೆ. ಅವರ ಕೈವಾಡ ಇಲ್ಲಿ ನಡೆಸುವುದು ಬೇಡ.

ಶ್ರೀ ಜೆ. ಡಿ. ಸೋಮಪ್ಪ.— ಅವರು ಎರಡು ಮೂರು ಕಂಡಿಷನ್‌ಗಳನ್ನು ಹಾಕಿದ್ದಾರೆ. ಪುಸ್ತಕಗಳನ್ನು ರಿ ಇಂಬರ್ಸ್ ಮಾಡಬೇಕು ಎಂದು ಮುಂತಾದ ೨–೩ ಕಂಡಿಷನ್‌ಗಳನ್ನು ಹಾಕಿದ್ದಾರೆ.

ಶ್ರೀ. ಹೆಚ್. ಗಂಗಾಧರನ್.—ಮಾನ್ಯ ಸೋಮಪ್ಪನವರಂ ಕೈವಾಡ ಇದೆ ಎಂದು ಆರೋಪಣೆ ಮಾಡಿದ್ದನ್ನು ತಾವು ಅಫೀಷ್ಯಂದು ಸೀರಿಯಸ್ಸಾಗಿ ತೆಗೆದಂಕೊಳ್ಳಬೇಕಾಗಿಲ್ಲ.

ಶ್ರೀ ಬಿ. ರಾಚಯ್ಯ.—ಬೆಂಗಳೂರು ನಗರದಲ್ಲಿ ಹೋಲ್‌ಸೇಲ್ ಏಜೆಂಟ್ಸ್ ಯಾರಿದ್ದಾರೆ ಅವರು ಪುಸ್ತಕಗಳನ್ನು ತೆಗೆದುಕೊಂಡು ಕಮಿಷನ್ ತೆಗೆದುಕೊಂಡು ರೀಟೇಲ್ ವೆಂಡರ್ಸ್‌ಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ರೀಟೇಲ್ ವೆಂಡರ್ಸ್ ಬೆಂಗಳೂರು, ಮೈಸೂರು, ಧಾರವಾಡ ಮುಂತಾದ ಎಲ್ಲಾಕಡೆಯಿಂದ ನನ ಹತ್ತಿರ ಬಂದು ನಮಗೆ ಹೊಟ್ಟೆಮೇಲೆ ಹೊಡೆಯಬೇಡಿ ೧೨ ಪರ್ಸೆಂಟ್‌ನಂತೆ ಮಾರಾಟ ಮಾಡುತ್ತೇವೆ, ಪುಸ್ತಕಗಳನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅವಕಾಶಮಾಡಿಕೊಡಬೇಕು, ಕೊನೆಗೆ ೧೦ ಪರ್ಸೆಂಟಿಗೂ ಮಾರುವುದಕ್ಕೆ ಸಿದ್ಧವಾಗಿದ್ದೇವೆ, ಹೊಟ್ಟೆಮೇಲೆ ಹೊಡೆಯಬೇಡಿ ಎಂದು ಬರೆದಂ

ಕೊಟ್ಟಿದ್ದಾರೆ. ಅಲ್ಲದೆ ಡಾಕ್ಟರ್ ರಾಜಕುಮಾರ್ ಸಂಘದವರು ಪುಕ್ಕಟೆಯಾಗಿ ಡಿಸ್ಟ್ರಿಬ್ಯೂಟ್ ಮಾಡುತ್ತೇವೆ ಎಂದು ಬರೆದಿದ್ದಾರೆ. ಕೆಲವರು ಹೈಸ್ಕೂಲುಗಳಂ, ಕಾಲೇಜುಗಳು ಈ ಜವಾಬ್ದಾರಿಯನ್ನು ವಹಿಸಿಕೊಂಡಿವೆ. ಬೆಂಗಳೂರು ನಗರದಲ್ಲಿ ಕೊಆಪರೇಟಿವ್ ಸೊಸೈಟೀಸ್, ಟಿ.ಎ.ಪಿ.ಎಂ.ಎಸ್. ಮುಖಾಂತರ ಸರ್ಕಾರದ ೧೬ ಸೆಂಟರ್‌ಗಳಲ್ಲಿ ಶಾಲೆಗಳಲ್ಲಿ ಕೂಡ ಪಠ್ಯಪುಸ್ತಕಗಳ ಮಾರಾಟದ ವ್ಯವಸ್ಥೆಯನ್ನು ಮಾಡಿದ್ದೇವೆ. ಹೊಸದಾಗಿ ಮಾಡತಕ್ಕಂಥ ಕಾಲದಲ್ಲಿ ಸ್ವಲ್ಪ ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ ತಂದೆತಾಯಿಗಳನ್ನು, ವಿದ್ಯಾರ್ಥಿಗಳನ್ನು ಕೇಳಿಕೊಳ್ಳುತ್ತೇನೆ; ದಯಮಾಡಿ ಇನ್ನೊಂದು ವಾರ ಸಹಕರಿಸಿ ನಂತರ ಪುಸ್ತಕಗಳ ಅಭಾವ ಇರುವುದಿಲ್ಲ, ಆ ರೀತಿ ಮಾಡುತ್ತೇವೆ. ಯಾರು ೧೨ ಪರ್ಸೆಂಟಿನಂತೆ ಮಾರಾಟಮಾಡುತ್ತೇವೆ ಎಂದು ಮುಂದೆ ಬಂದಿದ್ದಾರೆ, ಅವರಿಗೆಲ್ಲಾ ಕೊಡಿ ಎಂದಂ ಮೂರು ದಿವಸಗಳ ಹಿಂದೆ ಹೇಳಿದ್ದೇನೆ. ಮೈಸೂರು ಜಿಲ್ಲೆಯಲ್ಲಿ ಹೇಗೆ ವ್ಯಾಪಾರ ನಡೆಯುತ್ತಿದೆ ಎಂದು ಮಾನ್ಯ ಗಂಗಾಧರನ್‌ರವರನ್ನು ಕೇಳಿ. ಬೆಂಗಳೂರಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಯಾರು ವ್ಯಾಪಾರ ಮಾಡುತ್ತಾರೆ ಆ ಜನಗಳ ಪರವಾಗಿ ಇವರು ಮಾತನಾಡುತ್ತಾ ಇದ್ದಾರೆ. ನಾವು ಜನತೆಯ ಹಿತದೃಷ್ಟಿಯಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ತಂದೆತಾಯಿಗಳ ಹಿತದೃಷ್ಟಿಯಿಂದ ಮಾಡುತ್ತಿದ್ದೇವೆಯೇ ಇಲ್ಲವೇ ಎನ್ನುವುದನ್ನು ತಾವೇ ಯೋಚನೆಮಾಡಬೇಕಂ. ಆ ದೃಷ್ಟಿಯಿಂದ ಪಠ್ಯಪುಸ್ತಕಗಳ ವ್ಯಾಪಾರ ಇನ್ನೊಂದುವಾರದಲ್ಲಿ ಸರಿಹೋಗುತ್ತದೆ. ತಂದೆತಾಯಿಂಗಳಿಗೆ, ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಅನಿವಾರ್ಯ. ಅವರಲ್ಲಿ ಒಂದು ಶಂಕೆ ಇದೆ, ಪುಸ್ತಕಗಳು ತೀರಿಹೋದರೆ ನಮ್ಮ ಗತಿ ಏನು ಎಂಬ ಶಂಕೆ ಇದೆ.ಅದಕ್ಕೆ ಅವಕಾಶವಿಲ್ಲ. ನಾವು ಸಾಕಷ್ಟು ಪ್ರಮಾಣದಲ್ಲಿ ಪುಸ್ತಕಗಳನ್ನು ಮುದ್ರಣಮಾಡಿಸಿದ್ದೇವೆ. ಬೇರೆ ಭಾಷೆಗಳ ೯ ಟೈಟಲ್ಸ್ ಇನ್ನೂ ಬಂದಿಲ್ಲ. ಆಂಧ್ರ ತಮಿಳುನಾಡಿಗೆ ಕೆಲವು ಪುಸ್ತಕಗಳನ್ನು ಮುದ್ರಣಮಾಡಿಕೊಡಲು ಕೊಟ್ಟಿದ್ದೇವೆ. ಕನ್ನಡ ಪುಸ್ತಕಗಳನ್ನು ಅವರಿಗೆ ನಾವು ಮುದ್ರಣಮಾಡಿಕೊಡುತ್ತಾ ಇದ್ದೇವೆ. ಮಿಕ್ಕೆ ಎಲ್ಲಾ ಪುಸ್ತಕಗಳು ಬಂದಿವೆ. ಪುಸ್ತಕಗಳನ್ನು ಸಾಕಷ್ಟು ಪ್ರಮಾಣದಲ್ಲಿ ಮುದ್ರಿಸಿದ್ದೇವೆ. ಪುಸ್ತಕಗಳನ್ನು ದುಡ್ಡು ತೆಗೆದುಕೊಂಡು ಕೊಡಬೇಕು. ಎರಡನೆಯಂ ಕಂತನ್ನು ಕೊಡಬೇಕಾದರೆ ಸ್ವಲ್ಪ ತಡ ಆಗಿರಬಹುದು. ಈ ವ್ಯವಸ್ಥೆ ಸರಿಯಾಗಿಲ್ಲ ಎಂದಂ ಹೇಳುವುದು ಬೇಡ. ಇದಂ ಹಿಂದಿನಿಂದ ನಡೆದು ಕೊಂಡು ಬಂದಿರುವುದಂ.

ಶ್ರೀ ಎಂ. ಮಹದೇವ್.—ಅಡ್ಮಿಷನ್ ಫಾರಂ ಸಿಕ್ಕುತ್ತಾ ಇಲ್ಲ; ಡಿ. ಸಿ. ಫಾರಂ ಸಿಕ್ಕುತ್ತಾ ಇಲ್ಲ, ರಸೀದಿ ಪುಸ್ತಕ ಸಿಕ್ಕುತ್ತಾ ಇಲ್ಲ. ಇದು ಯಾವ ಆಡಳಿತ ?

ಶ್ರೀ ಬಿ. ರಾಚಯ್ಯ.—ಇದು ಮಹದೇವ್ ಆಡಳಿತ.

ಶ್ರೀ ಪಂಪಾವತಿ.—ಮಾನ್ಯ ಮಹದೇವ್ ಅವರಂ ಮೂತಂ ಬದಲಾಯಿಸುತ್ತಾ ಇದ್ದಾರೆ. ಅವರಂ ಪುಸ್ತಕಗಳ ಮಾರಾಟದ ಬಗ್ಗೆ ಹೇಳುತ್ತಿದ್ದಾರೆ, ಇವರು ಫಾರಂಗಳ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಮೈಸೂರಿನಿಂದ ಮಾನ್ಯ ಗಂಗಾಧರನವರು ಬಂದಿದ್ದಾರೆ, ಅಲ್ಲಿ ಹೇಗೆ ವ್ಯವಸ್ಥೆ ಇದೆ ಎಂದು ಕೇಳಿ. ಆದ್ದರಿಂದ ಇವರು ಹೇಳಿದ್ದರಲ್ಲಿ ಹುರಂಳಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಹದೇವ್.—ಆಲ್ಲಿ ಯಾವ ಹಣದ ರಸೀದಿ ಪುಸ್ತಕವೂ ಇಲ್ಲ.

ಶ್ರೀ ಜೆ. ಡಿ. ಸೋಮಪ್ಪ.—ಅವರು ಎರಡು, ಮೂರು ಕಂಡೀಷನ್‌ಗಳನ್ನು ಹಾಕಿದ್ದಾರೆ. ಒಂದಂ ತಿಂಗಳೊಳಗೆ ರೀಇಂಬರ್ಸ್ ಮಾಡಿಲ್ಲ.

ವಿಷಯ.—ಕಬಿನಿ ನದಿಗೆ ಕೇರಳದವರು ಅಣೆಕಟ್ಟು ಕಟ್ಟುವ ಬಗ್ಗೆ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೆ, ಕಬಿನಿ ನದಿಗೆ ಅಡ್ಡವಾಗಿ ಕೇರಳಸರ್ಕಾರದವರು ಒಂದಂ ದೊಡ್ಡ ಆಣೆಕಟ್ಟೆಯನ್ನು ಕಟ್ಟುತ್ತಾರೆ ಎನ್ನುವ ವದಂತಿ ಬಂದಿದೆ. ಅದನ್ನು ಪುಷ್ಟೀಕರಿಸಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಾದ ನಜೀರ್ ಸಾಹೇಬರು ಅದು ನಿಜ, ಅದನ್ನು ಕಟ್ಟುತ್ತಾ ಇದ್ದಾರೆ ಎಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದಾರೆ. ಕಬಿನಿ ನದಿಗೆ ಕೇರಳ ಸರ್ಕಾರದವರು ಏನಾದರೂ ಅಡ್ಡಗಟ್ಟೆ ಕಟ್ಟಿದ್ದರೆ ನಮ್ಮ ಕಬಿನಿ ಪ್ರದೇಶದ ಆಯುಕಟ್ಟಿನ ಜನರಿಗೆ ತೊಂದರೆಯಾಗುತ್ತದೆ. ಈ ಬಗ್ಗೆ ಸರ್ಕಾರದ ನಿಲುವು ಏನು? ಕರ್ನಾಟಕ ಸರ್ಕಾರದವರು ಕೇರಳ ಸರ್ಕಾರದವರಿಗೆ ಕಬಿನಿ ನದಿಗೆ ಅಡ್ಡಗಟ್ಟೆ ಕಟ್ಟುವುದಕ್ಕೆ ಅವಕಾಶ ಕೊಟ್ಟಿದ್ದಾರೆಯೇ ಅಥವಾ ಇವರನ್ನು ಕೇಳಿದ್ದಾರೆಯೇ, ಅಥವಾ ಕೇಂದ್ರ